# KARNATAK UNIVERSITY, DHARWAD

EXAMINATION SECTION, K.U.DHARWAD

Registrar (Evaluation) 0836-2215375


**Ref: No.KU/Exam/RVCell/2025/** **Date: 10-11-2025**

## ಸುತ್ತೋಲೆ

ವಿಷಯ:- UUCMS ಅಡಿಯಲ್ಲಿ ಪ್ರಕಟಿಸಲಾದ July/Aug 2025ರ (R-NEP) 2 ನೇ ಸೆಮಿಸ್ಟರ್ ಪರೀಕ್ಷಾ ಫಲಿತಾಂಶದ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನದ ಕುರಿತು.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಟ್ಟ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಗಮನಕ್ಕೆ ತರಬಯಸುವುದೇನೆಂದರೆ, July/Aug 2025ರ (R-NEP) 2 ನೇ ಸೆಮಿಸ್ಟರ್ ಫಲಿತಾಂಶವನ್ನು UUCMS ಅಡಿಯಲ್ಲಿ ಈಗಾಗಲೇ ಪ್ರಕಟಿಸಲಾಗಿದೆ. ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ದಿನಾಂಕ: **11-11-2025** ರಿಂದ **14-11-2025** ಛಾಯಾ ಪ್ರತಿ/ಅಂಕಗಳ ಮರು ಎಣಿಕೆ ಹಾಗೂ **19-11-2025** ರಿಂದ **27-11-2025** ವರೆಗೆ ಮರು ಮೌಲ್ಯಮಾಪನಕ್ಕೆ ಸದರ ದಿನಾಂಕಗಳ ಅವಧಿಯಲ್ಲಿ ವಿದ್ಯಾರ್ಥಿಗಳು ತಮ್ಮ **UUCMS Portal** ನ ಮುಖಾಂತರ ಅರ್ಜಿಗಳನ್ನು ಹಾಗೂ ಶುಲ್ಕವನ್ನು ಭರಿಸಲು ತಿಳಿಸಲಾಗಿದೆ.

ಶುಲ್ಕದ ವಿವರ:

| | | |
|---|---|---|
| **i.** | ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ ಪ್ರತಿ ಉತ್ತರ ಪತ್ರಿಕೆಗೆ | ರೂ. **650=00** |
| **ii.** | ಅಂಕಗಳ ಮರು ಎಣಿಕೆಗಾಗಿ ಪ್ರತಿ ಉತ್ತರ ಪತ್ರಿಕೆಗೆ | ರೂ. **255=00** |
| **iii.** | ಉತ್ತರ ಪತ್ರಿಕೆಯ ಛಾಯಾ ಪ್ರತಿಯ ಪ್ರತಿ ಉತ್ತರ ಪತ್ರಿಕೆಗೆ | ರೂ. **113=00** |

ಇನ್ನಿತರ ವಿವರಗಳು:

೧. ಸದರ ಸೆಮಿಸ್ಟರ್‌ಗಳಲ್ಲಿ ಮರು ಮೌಲ್ಯಮಾಪನಕ್ಕಾಗಿ ಸಲ್ಲಿಸುವ ಅರ್ಜಿಗಳ ಜೊತೆಗೆ ಶುಲ್ಕ ಭರಿಸಿ ಹಾಗೂ ಅಂತರ್‌ಜಾಲದಲ್ಲಿ ದೊರೆಯುವ ವಿದ್ಯಾರ್ಥಿಗಳ ಫಲಿತಾಂಶದ ಅಂಕ ಪಟ್ಟಿಯೊಂದಿಗೆ ಸಲ್ಲಿಸುವುದು. ( ಮೂಲ ಅಂಕಪಟ್ಟಿಯ ಅವಶ್ಯವಿರುವುದಿಲ್ಲ).

೨. ಗರಿಷ್ಠ ೨ ವಿಷಯಗಳಿಗೆ ಮಾತ್ರ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದು.

೩. ಸದರ ಮಾಹಿತಿಯನ್ನು ತಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಗಮನಕ್ಕೆ ತಪ್ಪದೇ ತರಲು ಸೂಚಿಸಲಾಗಿದೆ.

ವಿ.ಸೂ: ಕೊನೆಯ ದಿನಾಂಕ ಮುಗಿದ ಎರಡು ದಿನಗಳೊಳಗಾಗಿ ಎಲ್ಲ ವಿದ್ಯಾರ್ಥಿಗಳಿಂದ ವಿವರವಾದ ಮಾಹಿತಿಯನ್ನು ಪಡೆದು ಕ್ರೋಢಿಕರಿಸಿ ಅಧೀಕ್ಷಕರು, ಮರು ಮೌಲ್ಯಮಾಪನ ವಿಭಾಗ, ಕ.ವಿ.ವಿ. ಧಾರವಾಡ ಇವರಿಗೆ ಸಲ್ಲಿಸಲು ಸೂಚಿಸಿದೆ.

10/11/25

ಕುಲಸಚಿವರು (ಮೌಲ್ಯಮಾಪನ)

ಗೆ,

೧. ಸಂಬಂಧಪಟ್ಟ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರು/ವಿಭಾಗದ ಮುಖ್ಯಸ್ಥರು/ಕೋ-ಆರ್ಡಿನೇಟರುಗಳು

೨. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಚೇರಿ/ಕುಲಸಚಿವರ ಕಚೇರಿ/ವಿತ್ತಾಧಿಕಾರಿಗಳ ಕಚೇರಿ, ಕ.ವಿ.ವಿ. ಧಾರವಾಡ.

೩. ಸಹಾಯಕ ಕುಲಸಚಿವರು ಉಪಕುಲಸಚಿವರು, ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ಕುಲಸಚಿವರು (ಮೌಲ್ಯಮಾಪನ) ಇವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. ಉಪಕುಲಸಚಿವರು, ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬. ನಿರ್ದೇಶಕರು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕ.ವಿ.ವಿ.ಧಾರವಾಡ. ಇವರಿಗೆ ಅಂತರ್‌ಜಾಲದಲ್ಲಿ ಪ್ರಕಟಣೆಗಾಗಿ.

೭. ಸಿಸ್ಟಮ್ ಎನಾಲಿಸ್ಟ್ ಗಣಕಯಂತ್ರ ವಿಭಾಗ, ಕ.ವಿ.ವಿ.ಧಾರವಾಡ ಇವರ ಮಾಹಿತಿಗಾಗಿ ಹಾಗೂ ಸುತ್ತೋಲೆಯನ್ನು UUCMS Portal ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.